# ಕಾಗುಣಿತ ಪರೀಕ್ಷಕ ತಂತ್ರಾಂಶದ ಬಳಕೆದಾರರ ಕೈಪಿಡಿ

# ಪರಿವಿಡಿ


1. ಬಳಕೆ ನಿಯಮಗಳು......................................................................................................3.
2. ಯೂಸರ್ ಇಂಟರ್‌ಫೇಸ್ ..........................................................................................4.
3. ಪಠ್ಯ ಪರಿಷ್ಕರಣೆ ............................................................................................. 5 & 6
4. ಡೌನ್‌ಲೋಡ್ ಹಾಗೂ ರಿಸೆಟ್.........................................................................................7


# ಬಳಕೆ ನಿಯಮಗಳು

- ಕಾಗುಣಿತ ಪರೀಕ್ಷಕ ತಂತ್ರಾಂಶದ ಉತ್ತಮ ಬಳಕೆಗಾಗಿ ಗೂಗಲ್ ಕ್ರೋಮ್ (Google Chrome) ಬಳಸಿ
- ಟೆಕ್ಸ್ಟ್ ಎಡಿಟರ್‌ನಲ್ಲಿ ಬಳಸುವ ಪಠ್ಯ ಕಡ್ಡಾಯವಾಗಿ .txt file ಮಾದರಿಯಲ್ಲೇ ಇರಬೇಕು.
- ಕಡತ UPLOAD (ಅಪ್‌ಲೋಡ್) ಮಾಡಲು .txt file ಮಾದರಿಯನ್ನೇ ಬಳಕೆ ಮಾಡಬೇಕು.
- DOWNlOAD (ಡೌನ್‌ಲೋಡ್) ಮಾಡಿದ ಪಠ್ಯ .txt file ಮಾದರಿಯಲ್ಲಿ ಲಭ್ಯವಾಗಲಿದೆ.

ತಂತ್ರಾಂಶದ ಯು.ಆರ್.ಎಲ್ (URL): https://kagapa.com/ekannada




**ಚಿತ್ರ-1**

ಚಿತ್ರ-1 ರಲ್ಲಿ ತೋರಿಸಿರುವಂತೆ ಬಳಕೆದಾರರು ಟೆಕ್ಸ್ಟ್ ಎಡಿಟರ್ ಮೇಲೆ ಕ್ಲಿಕ್ ಮಾಡಿ, ಟೆಕ್ಸ್ಟ್ ಎಡಿಟರ್‌ನಲ್ಲಿ ಪಠ್ಯವನ್ನು copy and paste ಮಾಡುಬಹುದು. ಇಲ್ಲವೇ "ಕಡತವನ್ನು ಆಯ್ಕೆ ಮಾಡಿ" ಮೇಲೆ ಕ್ಲಿಕ್ ಮಾಡುವ ಮೂಲಕ ಕಡತವನ್ನು .text file ಮಾದರಿಯಲ್ಲಿ ಸಲ್ಲಿಸಬಹುದಾಗಿದೆ.




**ಚಿತ್ರ-2**

ಚಿತ್ರ-2 ರಲ್ಲಿ ತೋರಿಸಿರುವಂತೆ, ಟೆಕ್ಸ್ಟ್ ಎಡಿಟರ್‌ನಲ್ಲಿ ಪಠ್ಯವನ್ನು ನೀಡಿದ ಬಳಿಕ ಪ್ರೊಸೆಸ್ ಬಟನ್ ಮೇಲೆ ಕ್ಲಿಕ್ ಮಾಡಿ, ಆಗ ಪಠ್ಯದಲ್ಲಿ ತಪ್ಪಾದ ಪದಗಳಿಗೆ ಕೆಂಪುಗೆರೆ ಮೂಡುತ್ತದೆ.




**ಚಿತ್ರ-3**

ಚಿತ್ರ-3 ರಲ್ಲಿ ತೋರಿಸಿರುವಂತೆ, ಕೆಂಪುಗೆರೆ ಮೂಡಿದ ಪದದ ಮೇಲೆ ಒಂದು ಬಾರಿ ಕ್ಲಿಕ್ ಮಾಡಿದಾಗ ಪದವನ್ನು ತಿದ್ದುಪಡಿ ಮಾಡಬಹುದಾಗಿದ್ದು, ಎರಡನೇ ಬಾರಿ ಕ್ಲಿಕ್ ಮಾಡಿದಾಗ ತಪ್ಪಾದ ಪದಗಳಿಗೆ ಸಲಹೆಗಳು ಮೂಡುತ್ತವೆ. ಅವುಗಳಲ್ಲಿ ಸೂಕ್ತವಾದ ಪದವನ್ನು ಬಳಕೆದಾರರು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ ಪದಗಳು ಸರಿಯಾಗಿದ್ದರೆ ಅದನ್ನು Add to Dictionary ಮೇಲೆ ಕ್ಲಿಕ್ ಮಾಡಿ ಪದಕೋಶಕ್ಕೆ ಸೇರ್ಪಡೆ ಮಾಡಬಹುದಾಗಿದೆ. Replace All ಮೇಲೆ ಕ್ಲಿಕ್ ಮಾಡಿ ಒಂದು ಪದವನ್ನು ಇನ್ನೊಂದು ಪದದಿಂದ ಬದಲಿಸಬಹುದು. ಯಾವುದೇ ಆಯ್ಕೆಗಳು ಬೇಡವಾದರೆ Ignore ಮಾಡಬಹುದಾಗಿದೆ.




**ಚಿತ್ರ-4:**

ಚಿತ್ರ-4: ರಲ್ಲಿ ತೋರಿಸಿರುವಂತೆ ಪಠ್ಯದಲ್ಲಿನ ಕಾಗುಣಿತ ದೋಷಗಳನ್ನು ಸರಿಪಡಿಸಿದ ಬಳಿಕ Download (ಡೌನ್‌ಲೋಡ್) ಆಯ್ಕೆಯ ಮೇಲೆ ಕ್ಲಿಕ್ ಮಾಡಿ ಪಠ್ಯವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ, ಪಠ್ಯ ಪರಿಷ್ಕರಣೆಯ ವೇಳೆ ದೋಷಗಳು ಉಂಟಾದರೆ RESET (ರಿಸೆಟ್) ಬಟನ್ ಮೇಲ್ ಕ್ಲಿಕ್ ಮಾಡಿದರೆ, ಹಿಂದಿನ ತಿದ್ದುಪಡಿಗಳನ್ನು ಮರಳಿ ಪಡೆಯಬಹುದಾಗಿದೆ.